ಕುಂಯ್ಯ ಕುಂಯ್ಯ ಅಂತ ಜಗತ್ತಿಗೆ ಕೇಳುವಂತೆ ನಾಯಿ ಕಿರಿಚಿತು. ಕಾಲೂರಿ ನಡೆಯಲಾಗದೆ ಬಿದ್ದಲ್ಲೆ ಹೊರಳಾಡಿತು.

ಒಳಕೊಟ್ಟಿಗೆಯಿಂದ ಹೊರತಂದು ಅಂಗಳದಲಿ ಆಗತಾನೆ ಕಟ್ಟಿದ ಎತ್ತುಗಳ ಮೇಲೆ ಎಗರಿ ಗುದ್ದಿ ಓಡಿತು ಕೋಣ. ಎತ್ತುಗಳು ಗೂಟಕಿತ್ತು ನಿಂತವು.

ಬಲು ಸ್ಟೈಲಿನಲಿ, ರಾತ್ರಿಯ ಎಣ್ಣೆ ಸರಿಯಾಗಿ ಇಳಿದಿರದ ಹೊತ್ತಿನಲಿ, ಗುಡುಗುಡು ಬುಲೆಟ್ಟಿನಲಿ ಬಂದವನ ಎದುರು ಈ ಕೋಣ ಅಡ್ಡಗಟ್ಟಿ ಆಡಿಸಿತು. ಉರಿಗಣ್ಣ ಕಂಡು ಎಣ್ಣೆಯ ಮತ್ತು ದರ್‍ರನೆ ಕರಗಿ ನೀರಾಗಿ ಮೈಬೆವೆಯಿತು, ಕೈ ನಡುಗಿತು. ಗುಡು ಗುಡುವ ಬೈಕ್ ಮಲಗಿಸಿ ಪಕ್ಕದ ಕಾಂಪೌಂಡ್ ನೆಗೆದು ಒಳಸೇರಿದ.

ಹಬ್ಬಕೆ ತಂದ ಹೊಸಾ ಕೆಂಪುಸೀರೆ ಉಟ್ಟ ಜಾನಕವ್ವ ಅಂಗಳ ಗುಡಿಸಿ ನೀರುಹಾಕಿ, ನಡು ಅಂಗಳದಲಿ ಚಂದಕೆ ರಂಗೋಲೆ ಬಿಡುತಲಿದ್ದಾಗ ಅವಳ ಮೇಲೆ ಹಾರಿ ನೆಗೆದೋಡಿತು. ಜಾನಕವ್ವನ ಭುಜಕ್ಕೆ ಕೋಣದ ಕಾಲು ತಾಗಿ, ತೂದು ಎಸೆದಂಗೆ ಅತ್ತೋಗಿ ಬಿದ್ದಳು ಎತ್ತಿ ಕುಸುಕಿದಂತೆ.

"ಅಯ್ಯಯ್ಯೋ ಅಯ್ಯಯ್ಯೋ ಹೋತಲಪ್ಪೋ... ನನ ರೊಂಡಿ ಹೋತಲ್ಲಪ್ಪೋ ಅಯ್ಯಯ್ಯೋ" ಎಂದು ಊರುಕೇರಿ ಮೊಳಗುವಂತೆ ಲಬ್ ಲಬೋ ಬಡಕೊಂಡಳು. ಮನೆಯವರು ಅಕ್ಕಪಕ್ಕದ ಮನೆಯವರೆಲ್ಲಾ ಸೇರಿ ಅಂಗಾತ ಬಿದ್ದವಳ ಎಬ್ಬಿಸಿ ಕೂರಿಸಲು ನೋಡಿದರು.

"ಅಯ್ಯೋ ಅಯ್ಯೋ... ನೋವು ನೋವು. ತಡಿಯೋಕೆ ಆಗದ ನೋವು. ನನಜೀವ ಹೋತಲ್ಲಪ್ಪೋ. ತೋಳಿಗೆ ಪೆಟ್ಟು ಬಿದ್ದತೆ. ಸೊಂಟದ ನೋವು ಹೇಳತೀರದು." ಕನಲಿದಳು ಜಾನಕವ್ವ. ಅನಾಮತ್ತಾಗಿ ಎತ್ತಿಕೊಂಡು ಹೋಗಿ ಕಟ್ಟೇಲಿ ಮಲಗಿಸಿದರು. ಆಂಬುಲೆನ್ಸ್‌ಗೆ ಫೋನಾಯಿಸಿ ಒಂದು ತಾಸಿನಲ್ಲಿಯೇ ಆಸ್ಪತ್ರೆ ಸೇರಿಸಿದರು. ಶಿವಮೊಗ್ಗ ಪೇಟೇಲಿ ಕೆಲಸದಲ್ಲಿರೋ ಜಾನಕವ್ವನ ಮಗ ಬಂದು, ಅವ್ವನ ಕಂಡು ಎಲ್ಲಾ ಕೇಳಿ, ಎಲ್ಲಾ ತಿಳಕೊಂಡು, ನ್ಯಾಮತಿ ಪೊಲೀಸ್ ಸ್ಟೇಷನ್‌ಗೆ ಹೋಗಿ–

'ಮಾರಿಕೋಣ ನನ್ನವ್ವನ ರೊಂಡಿ ಮುರಿದಿದೆ. ಕೋಣ ಹಿಡಿದುತರಿಸಿ ಕಟ್ಟಿರಿ. ನನ್ನವ್ವನ ಆಸ್ಪತ್ರೆ ಖರ್ಚು ಕೋಣನ ಊರವರು ಕೊಡಲಿ' ಎಂದು ದೂರು ಕೊಟ್ಟ.

